








ನಿಮಿತ್ತ ಕಾಂಡೋಮ್ ಬೈಕ್ ತಯಾರಿಸಿದ್ದರೆ, ಸಿಗರೇಟ್ ಹಾನಿಕಾರಕವೆಂದು ಸೂಚಿಸಲು 'ಸಿಗರೇಟ್ ಕಾರು' ರಚಿಸಿ ಜನ ಜಾಗೃತಿಯನ್ನುಂಟು ಮಾಡಿದರು.

ಇವಲ್ಲದೇ ಶೌಚಾಲಯ ಕಾರು, ಕ್ಯಾಮೆರಾ ಕಾರು, ಹೆಲ್ಮೆಟ್ ಕಾರು, ಶಿವಲಿಂಗ ಕಾರು, ಬರ್ಗರ್ ಕಾರು, ಕಂಪ್ಯೂಟರ್ ಕಾರು, ಆರಾಮ ಕುರ್ಚಿ ಕಾರು, ಕ್ರಿಕೆಟ್ ಬ್ಯಾಟ್ ಕಾರು, ಕ್ರಿಕೆಟ್ ಬಾಲ್ ಕಾರು, ಫುಟ್ ಬಾಲ್ ಕಾರು, ಟೆನಿಸ್ ಬಾಲ್ ಕಾರು, ಚೆಸ್ ಬೋರ್ಡ್ ಕಾರು, ಪಕ್ಷಿಯ ಪಂಜರದ ಕಾರು, ಲಂಡನ್‌ನ ಕೆಂಪು ಬಸ್ಸಿನ ಕಾರು, ಮಂಚದ ಕಾರು, ಕಪ್ಪುಬಸಿ ಕಾರು, ಡೈನಿಂಗ್ ಟೇಬಲ್ ಕಾರು, ಶೂ ಕಾರುಗಳಿವೆ. ಇನ್ನೊಂದು ಅದ್ಭುತ ಹೇಳಬೇಕೆಂದರೆ ಟಿಕೆಟ್ ಕೊಡುವ ಕೌಂಟರ್ ಕೂಡ ಕಾರಿನ ಮಾದರಿಯಲ್ಲಿದೆ.

ಬೈಸಿಕಲ್ಲುಗಳನ್ನು ಮೇಡ್ ಫಾರ್ ಈಚ್ ಅದರ್, ಪೆನ್ನಿ ಪಾರ್ಥಿಂಗ್ಸ್ ಎಂದು ವಿನ್ಯಾಸದ ಆಧಾರದ ಮೇಲೆ ಹೆಸರಿಸಲಾಗಿದೆ. ಮೋಟರ್ ಬೈಕುಗಳಲ್ಲಿ ಅತ್ಯಂತ ಚಿಕ್ಕದೆಂದರೆ ಕೇವಲ 13 ಇಂಚಿನದಾಗಿದ್ದು, ಗಂಟೆಗೆ 30 ಕಿ.ಮೀ. ವೇಗದಲ್ಲಿ ಚಲಿಸುತ್ತದೆ. ಇನ್ನೊಂದು ಅಂಶವನ್ನು ನಾವು ನೆನಪಿನಲ್ಲಿರಿಸಿಕೊಳ್ಳಬೇಕು. ಇವೆಲ್ಲ ಹಳೆಯ, ಕೆಲಸಕ್ಕೆ ಬಾರದ ಗುಜರಿ ಅಂಗಡಿಯ ವಸ್ತುಗಳಿಂದ ತಯಾರಾಗಿವೆ. ಇವು ರೂಪ ಪಡೆಯಲು ಕನಿಷ್ಠ 20 ದಿನಗಳಿಂದ 3 ವರ್ಷ ಸಮಯ ತೆಗೆದುಕೊಂಡಿವೆ. ಇವು ನಿಂತಲ್ಲೇ ನಿಲ್ಲುತ್ತವೆ ಎಂದರೆ ಅದೂ ತಪ್ಪಾದೀತು. ಉತ್ತಮ ಸ್ಥಿತಿಯಲ್ಲಿರುವ ಬಹುತೇಕ ವಾಹನಗಳು ರಸ್ತೆಗಿಳಿಯಬಲ್ಲವು.

ಕರ್ನಾಟಕದಿಂದ ಬಂದಿದ್ದ ಜಯಶ್ರೀ ಮತ್ತು ದಾಕ್ಷಾಯಿಣಿ ಎನ್ನುವವರು 'ಅಬ್ಬಾ, ಇಷ್ಟೊಂದು ವಿಧದ ಕಾರುಗಳಿವೆ ಎಂದು ನಾವು ಊಹಿಸಿಯೂ ಇರಲಿಲ್ಲ. ' ಎಂಬ ಉದ್ಗಾರ ತೆಗೆದರು.

ಈ ಮ್ಯೂಸಿಯಂ ಹೈದರಾಬಾದಿನ ಬಹದೂರಪುರದಲ್ಲಿದೆ. ವಾರಪೂರ್ತಿ ಬೆಳಗಿನಿಂದ ಸಂಜೆವರೆಗೆ ಪ್ರವಾಸಿಗರಿಗಾಗಿ ತೆರೆದಿರುತ್ತದೆ. ಪ್ರವೇಶ ದರ ರೂ. 50. ಸದ್ಯದಲ್ಲೇ ಇದೇ ಸಂಸ್ಥೆಯವರು ಪ್ರಾಣಿಗಳ ಉದ್ಯಾನವನ್ನು ಮಾಡುವ ತಯಾರಿಯಲ್ಲಿದ್ದಾರೆ. ಅದು ಸಾಧ್ಯವಾದರೆ ಜೀವಂತ ಪ್ರಾಣಿಗಳಂತೆ ನಡೆದಾಡುವ ಪ್ರಾಣಿಗಳ ವಾಹನಗಳನ್ನು ನೋಡಬಹುದು.

ಈ ಮ್ಯೂಸಿಯಂ ಅನ್ನು ಕಾರುಗಳ ಬಗ್ಗೆ ಒಲವಿರುವವರು ಮಾತ್ರ ನೋಡಬೇಕೆಂದೇನೂ ಇಲ್ಲ. ಕಲೆ ಮತ್ತು ಸೃಜನಾತ್ಮಕತೆಯನ್ನು ಮೆಚ್ಚುವವರೂ ನೋಡಬಹುದು. ಮಕ್ಕಳು ಈ ತಾಣಕ್ಕೆ ಭೇಟಿ ನೀಡಿದರೆ ಖುಷಿಪಡುವುದಷ್ಟೇ ಅಲ್ಲ; ಅವರಲ್ಲಿ ಸೃಜನಾತ್ಮಕ ಭಾವನೆಗಳು ಗರಿಗೆದರುತ್ತವೆ. •